Regd NoB G 155 6-12-1969

SATYAVADI Daily, MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಶಿವಸೇನೆಯ ಕಪ್ಪು ಬಾವುಟ ಪ್ರದರ್ಶನ

ಫೋಂಡಾಮೃಗಗಳು

ಅಸ್ಸಾಮಿನ ಒಂದು ಕೊಂಬಿನ ಫೋಂಡಾ ಮೃಗಗಳ ಸಂಖ್ಯೆ ಕಡಮೆಯಾಗುತ್ತಿದೆ : ಅದರ ಕೊಂಬು ಔಷಧಿ ಮತ್ತಿತರ ಕಾರ್ಯಗಳಿಗೆ ಉಪಯೋಗವಾಗಿದ್ದು ತುಂಬಾ ಕೇಳಿಕೆಯಿದೆ : ಭಾರತದಲ್ಲಿ ಒಂದು ಕಿಲೋಗೆ ರೂ 10000, ವಿದೇಶಗಳಲ್ಲಿ ಇನ್ನೂ ಹೆಚ್ಚು ದೊರೆಯುತ್ತಿರುವದರಿಂದ, ಅರಣ್ಯ ಕಾನೂನಿಗೆ ವಿರೋಧವಾಗಿ ಒಂದು ಗುಂಪು ಕಳ್ಳತನದಿಂದ ಕೊಲ್ಲುತ್ತಿದೆ ; ಇದರ ರಕ್ಷಣೆಗಾಗಿ ಫ್ರಾಂಕ್‌ಫರ್ಟ್ ಪ್ರಾಣಿ ಸಂಘದವರು 24 ಬಂದೂಕಗಳನ್ನು ಉದಾರ ದಾನ ಮಾಡಿದ್ದಾರೆ.

★

ದೇಶದ್ರೋಹ ಕಾರ್ಯ

ನವದೆಹಲಿ— ಪಶ್ಚಿಮ ಬಂಗಾಳಾ ನೆಕ್ಸಲೈಟ್ ಕಮ್ಯೂನಿಸ್ಟ್ ಪತ್ರಿಕೆ ' ದೇಶಬ್ರತ್ " ಚೀನಾ ಅಧ್ಯಕ್ಷ ಮಾವೋ " ಭಾರತದ ಅಧ್ಯಕ್ಷ " ಎಂದು ವಿವರಿಸಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

○

ವಿನೋಬರವರ ಸ್ವಾಸ್ಥ್ಯ ಸಲಹೆ

ನಾಗಪುರ— ರಾಜಕಾರಣಿಗಳು 65ನೇ ವರ್ಷದಲ್ಲಿ ನಿವೃತ್ತರಾಗಬೇಕೆಂದೂ, 60 ವರ್ಷಗಳ ನಂತರ ಚುನಾವಣೆಗೆ ನಿಲ್ಲಬಾರದೆಂದೂ ಆಚಾರ್ಯ ವಿನೋಬಾ ಭಾವೆ ಅಭಿಪ್ರಾಯ ವ್ಯಕ್ತಪಡಿಸಿದರು.

★

ರಾಜಧನ

ನವದೆಹಲಿ—ಶ್ರೀ ಚವಣರು ರಾಜತೊಡನೆ ನಡೆಸುತ್ತಿರುವ ಮಾತುಕತೆ ಈ ವರ್ಷ ಕಡೆಯೊಳಗೆ ಮುಗಿದಂತರ, ರಾಜಧನ ರದ್ದಿಯಾತಿ ವಿಷಯ ಸರ್ಕಾರ ನಿರ್ಧರಿಸುವುದೆಂದು ಪ್ರಧಾನಿ ಹೇಳಿದರು.

★

ಪ್ರಕಟನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ— 1 ನೇ ಏಪ್ರಿಲ್ 1970 ರಿಂದ 31 ನೇ ಮಾರ್ಚ್ 1971 ರವರೆಗೆ (ಎರಡು ದಿನಗಳೂ ಸೇರಿ) ಜೀಕಾದ ಬ್ರೆಡ್ (ಮೊದಲನೆ ದರ್ಜೆ) ಸರಬರಾಜು ಮಾಡಲು ಮುದ್ರಿತ ವಿಧಾಯಕ ಫಾರಂನಲ್ಲಿ ನಾಲ್ಕು ಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು 23 ನೇ ಡಿಸೆಂಬರ್ 1969 ರ ಬೆಳಿಗ್ಗೆ 11 ಗಂಟೆವರೆಗೆ ಈ ಕೆಳಗೆ ಕಂಡ ಆಸ್ಪತ್ರೆಗಳಿಗಾಗಿ ಮೈಸೂರಿನಲ್ಲಿರುವ ಕಂಟೈಂಡ್ ಆಸ್ಪತ್ರೆಗಳ, ಟೆಂಡರ್ ಸಮಿತಿ ಛೇರ್ಮೆನರವರಿಂದ ಸ್ವೀಕರಿಸಲ್ಪಡುತ್ತದೆ.

1. ಕೆ. ಆರ್. ಆಸ್ಪತ್ರೆ, ಮೈಸೂರು.
2. ಜೆಲುವಾಂಬಾ ಆಸ್ಪತ್ರೆ ಮೈಸೂರು
3. ಪಿ.ಕೆ.ಸ್ಯಾನಿಟೋರಿಯಂ ಮೈಸೂರು
4. ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಮೈಸೂರು
5. ಇ. ಡಿ. ಆಸ್ಪತ್ರೆ, ಮೈಸೂರು.
6. ಎಸ್. ಎಂ. ಟಿ. ಮೆಟರ್ನಿಟಿ ಆಸ್ಪತ್ರೆ, ಮೈಸೂರು
7. ಎಫ್. ಸಿ. ಸಿ. ಮೆಟರ್ನಿಟಿ ಆಸ್ಪತ್ರೆ ಮೈಸೂರು
8. ಶಂಕರಶೆಟ್ಟಿ ಮತ್ತು ಲಕ್ಷ್ಮೀದೇವಮ್ಮ ಮೆಟರ್ನಿಟಿ ಹೋಂ, ಮೈಸೂರು.

——

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನೆ ಅಧಿಕಾರಿಯವರು
ಜಿಲ್ಲಾ ಸರ್ಜನ್
ಡೀನ್ ಮತ್ತು ಛೇರ್ಮೆನ್, ಟೆಂಡರ್ ಸಮಿತಿ
ಆಸ್ಪತ್ರೆಯ ವೈದ್ಯಾಧಿಕಾರಿಯವರು

ಇವರಿಂದ ವಿವರಯುತ ಟೆಂಡರ್ ಪ್ರಕಟಣೆಯನ್ನು, ಫಾರಂನ ಪ್ರತಿಯೊಂದಕ್ಕೆ ರೂ. 5/– (ಐದು ರೂ ಗಳು ಮಾತ್ರ) ಪಾವತಿ ಮಾಡಿ ಪಡೆಯಬಹುದು. ಟೆಂಡರ್ ಸಲ್ಲಿಸುವ ಎಲ್ಲಾ ನಾಲ್ಕು ಪ್ರತಿಗಳು ಮುದ್ರಿತ ವಿಧಾಯಕ ಫಾರಂನಲ್ಲಿ (ಕೈಬರಹ ಫಾರಂನಲ್ಲಿ ಅಲ್ಲ) ಇರಬೇಕು ಮತ್ತು ನಾಲ್ಕು ಫಾರಂಗಳಿಗೆ ರೂ. 20 ಪಾವತಿ ಮಾಡಬೇಕು.

ಸಹಿ /– ಬಿ. ವಿ. ಪುಟ್ಟರಾಜೆ ಅರ್ಸ್
ಛೇರ್ಮೆನ್, ಟೆಂಡರ್ ಸಮಿತಿ.

ಸ್ವಾಮಿಗೆ ಪ್ರಾಣಾರ್ಪಣೆ

ತಿರುಪತಿ— ವಿಶಾಖಪಟ್ಟಣ ಜಿಲ್ಲೆಯ ಒಮ್ಮೇರಾಮುಲು ತನ್ನ ಪ್ರಾಣವನ್ನು ಅರ್ಪಿಸಿದನು. ಇಲ್ಲಿಗೆ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಡನೆ ಬಂದ ಅ ಕಲ್ಯಾಣಕಟ್ಟೆ (ಮುಡಿ ಕೊಡುವ ಸ್ಥಳ) ಯಲ್ಲಿ ಒಂದು ಕ್ಷೌರಕತ್ತಿಯಿಂದ ತನ್ನ ಕತ್ತನ್ನು ಕೊಯ್ದುಕೊಂಡನು. ಆಸ್ಪತ್ರೆಗೆ ಸಾಗಿಸಲ್ಪಟ್ಟು ಕೂಡಲೇ ಸತ್ತುಹೋದನು – ತನ್ನ ಜೀವವನ್ನು ದೇವರಿಗೆ ಅರ್ಪಿಸುವದಾಗಿ ಹೇಳುತ್ತಿದ್ದನು

○

ಕುರಿಗಳ ಕೊಲೆ

ಶಿವಮೊಗ್ಗ— ಸಹ್ಯಾದ್ರಿ ಕಾಲೇಜು ಹತ್ತಿರ ಮರ ತುಂಬಿದ ಲಾರಿ ರಸ್ತೆಯಲ್ಲಿ ಹೋಗುತ್ತಿದ ಕುರಿ ಮಂದೆಯ ಮೇಲೆ ಹರಿದು 14 ಕುರಿಗಳು ಸತ್ತವು.

ಕಪ್ಪು ಬಾವುಟ ಪ್ರದರ್ಶನ .

ಬೊಂಬಾಯಿ— ಭಾನುವಾರ ಇಲ್ಲಿಗೆ ಬರಲಿರುವ ಹೊಸ ಕಾಂಗ್ರೆಸ್ ಅಧ್ಯಕ್ಷ ಸುಬ್ರಹ್ಮಣ್ಯಂರವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಲು ಶಿವಸೇನೆ ನಿರ್ಧರಿಸಿದೆ.

★

ಗಾಂಧೀನಗರ

ಅಹಮದಾಬಾದು— ಇಲ್ಲಿ 21–23 ರಲ್ಲಿ ನಡೆಯುವ ಹಳೇ ಕಾಂಗ್ರೆಸ್ಸಿನ 73 ನೇ ಅಧಿವೇಶನ ನಡೆಸುವ ಸ್ಥಳಕ್ಕೆ " ಗಾಂಧಿ ನಗರ " ವೆಂದು ಕರೆಯುವ ಸಂಭವವಿದೆಯೆಂದೂ, 12000 ಜನ ಕೂತುಕೊಳ್ಳಲು ಅನುಕೂಲಿಸುವಂತೆ ಚಪ್ಪರ ನಿರ್ಮಿಸಲಾಗುವದೆಂದೂ ಗೊತ್ತಾಗಿದೆ.

●

ಕ್ಷಯರೋಗ ಆಸ್ಪತ್ರೆ ಉದ್ಘಾಟನೆ

ಮಂಡ್ಯ— ಇಲ್ಲಿಗೆ 5 ಮೈಲಿ ದೂರದ ಹೊಸೂರು ಕಾಲನಿಯಲ್ಲಿ ಮಹಾತ್ಮಾ ಗಾಂಧಿ ಸ್ಮಾರಕ ಕ್ಷಯರೋಗ ಆಸ್ಪತ್ರೆಯನ್ನು ನಿನ್ನೆ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟಿಸಿದರು.

★

ಮದರಾಸು— 1970 ರ ಪ್ರಥಮ ಅರ್ಧ ವರ್ಷದಲ್ಲಿ ಅಮೇರಿಕಾ ಭಾರತಕ್ಕೆ 3 ಮಿಲಿಯ ಟ್ಸ್ ಗೋಧಿ ಸರಬರಾಜು ಮಾಡುವದಾಗಿ ತಿಳಿಸಲಾಗಿದೆ.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಕುಟುಂಬ ಯೋಜನೆ

ಬೆಂಗಳೂರು— ಪ್ರಸಕ್ತ ವಾರ್ಷಿಕ ಸಾಲಿನ ಏಳು ತಿಂಗಳ ಅವಧಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 29377 ಸ್ತ್ರೀ-ಪುರುಷರಿಗೆ ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆಯನ್ನು ಕೈಗೊಂಡು 8370 ಮಹಿಳೆಯರಿಗೆ ಗರ್ಭನಿರೋಧಕಗಳನ್ನು ಮಾಡಿಸಲಾಗಿದೆ.

ಬಾಂಬು ಪ್ರತಿಬಂಧಕತ್ವಕ್ಕೆ

ಬಾಂಬು ಪ್ರತಿಬಂಧಕ ಒಪ್ಪಂದಕ್ಕೆ ಪಶ್ಚಿಮ ಜರ್ಮನಿ ರುಜು ಮಾಡಲು ನಿರ್ಧರಿಸಿದೆ.

ಸೌದಿ ಅರೇಬಿಯಾ ಧೊರೆಯ ಆದಾಯ

ಸೌದಿ ಅರೇಬಿಯಾಕ್ಕೆ ಎಣ್ಣೆಯಿಂದ ವರ್ಷಕ್ಕೆ 300 ಮಿಲಿಯ ಪೌಂಡು ಆದಾಯವಿದೆ : ರಾಜಾ ಫಿಸಾಲ್‌ರವರ ಈ ರಾಜ್ಯದಲ್ಲಿ ಮೆಕ್ಕಾ ಮೆಡೀನಾ ಇರುವುದರಿಂದ ಇಸ್ಲಾಮ್ಮಿ ವಿಶ್ವದಲ್ಲಿ ಇವುಗೆ ವಿಶೇಷ ಸ್ಥಾನವಿದೆ.

ನಿಜಲಿಂಗಪ್ಪನವರು ರಾಜೀನಾಮೆ ಕೊಡಲಿ

ಬೆಂಗಳೂರು— ಶ್ರೀ ನಿಜಲಿಂಗಪ್ಪನವರ ಕಾಂಗ್ರೆಸ್ ಮೈಸಸರಿನಲ್ಲಿದ್ದರಿ ರಾಜ್ಯದ ವಿಭಜನೆ ಚಳವಳಿ ಪ್ರಾರಂಭವಾಗುವುದು ಖಂಡಿತವೆಂದು ಪ್ರಧಾನಿಯವರ ಗುಂಪಿನ ಶ್ರೀ ಎಂ ವಿ ಕೃಷ್ಣಪ್ಪನವರು ಹೇಳಿದರು. ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ಸಿಗೆ ರಾಜೀನಾಮೆ ಇತ್ತು, ಪ್ರಧಾನಿಯವರಿಗೆ ವಹಿಸಬೇಕೆಂದು ಹೇಳಿದರು.

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು.
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.
3 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

SHAKTI
SUDHA
A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಇದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯಲ್ಲಿ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಷೇಧವಾಗಲಿ

ಪುಡ್‌ಲಾಂಡ್ ತಾ.5-12-69 ರಿಂದ
ಶಿ — ನಿ ಅಮೋಘ ಪ್ರಾರಂಭ
ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್
ಚಿರಾಗ್ ★ CHIRAG
ತಾರಾಗಣ— ಸುನೀಲ್‌ದತ್, ಆಶಾಪರಾಖ್, ಲಲಿತಾಪವಾರ್, ಓಂಪ್ರಕಾಶ್
ನಿರ್ದೇಶನ : ರಾಜ್ ಖೋಸ್ಲ ಸಂಗೀತ : ಮದನ್ ಮೋಹನ್
[ದಿನ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 2ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ದೈವಮಗನ್
ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
Protectthe Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore